# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 662 (725) |
| 2. ಸದಸ್ಯರ ಹೆಸರು | : | ಶ್ರೀ ಐವನ್ ಡಿ' ಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3. ಉತ್ತರಿಸಬೇಕಾದ ದಿನಾಂಕ | : | 16.12.2024 |
| 4. ಉತ್ತರಿಸಬೇಕಾದ ಸಚಿವರು | : | ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಕಸ್ತೂರಿ ರಂಗನ್ ವರದಿಯನ್ವಯ ಕರಾವಳಿ ಭಾಗದಲ್ಲಿ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವವರನ್ನು ಒಕ್ಕಲೆಬ್ಬಿಸುತ್ತಿದ್ದು ಈ ಬಗ್ಗೆ ಕೈಗೊಂಡಿರುವ ಕ್ರಮವೇನು: (ವಿವರ ನೀಡುವುದು) | ಡಾ\|\| ಕಸ್ತೂರಿ ರಂಗನ್ ಸಮಿತಿಯ ವರದಿಯ ಶಿಫಾರಸ್ಸುಗಳನ್ನು ನಿರಾಕರಿಸಿ, ವರದಿ ಸಂಬಂಧ ಹೊರಡಿಸಿದ ಕರಡು ಅಧಿಸೂಚನೆಯನ್ನು ತಿರಸ್ಕರಿಸುವ ರಾಜ್ಯ ಸರ್ಕಾರದ ನಿಲುವನ್ನು ಡಾ\|\| ಎಸ್. ಕೆರ್ಕಟ್ಟಾ, MoEF & CC, ನವದೆಹಲಿ ರವರಿಗೆ ದಿನಾಂಕ: 30.09.2024 ರ ಪತ್ರವನ್ನು ಬರೆಯಲಾಗಿರುತ್ತದೆ. ಡಾ\|\| ಕಸ್ತೂರಿ ರಂಗನ್ ವರದಿಯು ಈವರೆವಿಗೂ ಜಾರಿಯಾಗದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಆ) | ಅರಣ್ಯ ಪ್ರದೇಶವಲ್ಲದ ಸ್ಥಳಗಳಲ್ಲಿಯೂ ಅರಣ್ಯ ಇಲಾಖೆಯವರು ನೋಟೀಸ್ ನೀಡದಿರುವುದು ಸರಿಯೇ: (ವಿವರ ನೀಡುವುದು) | |
| ಇ) | ಕೇಂದ್ರ ಸರ್ಕಾರ ಕಸ್ತೂರಿ ರಂಗನ್ ವರದಿಯನ್ನು ಜಾರಿಗೊಳಿಸಲು ತೀರ್ಮಾನಿಸಿದೆಯೇ; ರಾಜ್ಯ ಸರ್ಕಾರದ ತೀರ್ಮಾನವೇನು: (ವಿವರ ನೀಡುವುದು) | |
| ಈ) | ಕಸ್ತೂರಿ ರಂಗನ್ ವರದಿ ಜಾರಿಗೊಳಿಸಿದ್ದಲ್ಲಿ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ನಿವಾಸಿಗಳು ಬೀದಿ ಪಾಲು ಆಗಲಿದ್ದು ಈ ಬಗ್ಗೆ ಚಿಂತನೆ ನಡೆಸಿದೆಯೇ: (ವಿವರ ನೀಡುವುದು) | ಉದ್ಭವಿಸುವುದಿಲ್ಲ. |
| ಉ) | ರಾಜ್ಯದಲ್ಲಿ ಕಸ್ತೂರಿ ರಂಗನ್ ವರದಿ ಜಾರಿಯಾದಲ್ಲಿ ಎಷ್ಟು ಕುಟುಂಬಗಳು ಬೀದಿಪಾಲು ಆಗುತ್ತದೆ ಅಭಿವೃದ್ಧಿ ಕಾಮಗಾರಿಗಳು ಕುಂಠಿತಗೊಂಡಿದಲ್ಲಿ ಶಾಲಾ, ಆಸ್ಪತ್ರೆ ಅಭಿವೃದ್ಧಿ ಮೇಲೂ ಪರಿಣಾಮ ಬೀರಲಿದ್ದು ಈ ಕುರಿತು ಸರ್ಕಾರದ ನಿಲುವು ಏನು; | |
| ಊ) | ಸದರಿ ವರದಿ ಜಾರಿಯಾಗದಿದ್ದರೂ ಕಳೆದ ಕೆಲವು ವರ್ಷಗಳಿಂದ ಶಾಲಾ ಕಟ್ಟಡಗಳಿಗ, ಆಸ್ಪತ್ರೆಗಳಿಗೆ, ಮನೆಗಳನ್ನು ಕಟ್ಟಲು ಪರವಾನಿಗೆ ನಿರಾಕರಿಸುತ್ತಿರುವುದು ಸರಿಯೇ? (ವಿವರ ನೀಡುವುದು) | |

**ಸಂಖ್ಯೆ:** ಅಪಜೀ 267 ಇಎನ್ ವಿ 2024

(ಈಶ್ವರ್ ಬಿ. ಖಂಡ್ರೆ)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು